


## ಐಸೆಲ್

ಐಪ್ಯಾಡ್‌ನ ಈ ಆ್ಯಪ್ ವಿದ್ಯಾರ್ಥಿಗಳ ಕಲಿಕೆಗೆ ನೆರವು ನೀಡುತ್ತದೆ. ಇದು ಉಚಿತವಾಗಿದ್ದು, ಜೀವಕೋಶಗಳ ರಚನೆಯ ಬಗ್ಗೆ 3ಡಿ ಚಿತ್ರದೊಂದಿಗೆ ವಿವರಣೆ ನೀಡುತ್ತದೆ. ಆ್ಯಪ್‌ನ ಮೇಲ್ಮೈ ಸರಳವಾಗಿದ್ದು, ಪ್ರಾಣಿಗಳು, ಬ್ಯಾಕ್ಟೀರಿಯ ಹಾಗೂ ಸಸ್ಯಗಳ ಜೀವಕೋಶಗಳೆಂಬ ಮೂರು ವಿಭಾಗಗಳನ್ನು ಮಾಡಲಾಗಿದೆ. ಈ ಚಿತ್ರಗಳ ಮೇಲೆ ಕುಟ್ಟಿದರೆ ಸಂಬಂಧಪಟ್ಟ 3ಡಿ ಚಿತ್ರಗಳು ಕಾಣಿಸಿಕೊಳ್ಳುತ್ತವೆ. ಬೆರಳಿನಿಂದ ಚಿತ್ರವನ್ನು ಹಿಗ್ಗಿಸಿ, ತಿರುಗಿಸಿ ನೋಡಬಹುದು. ಕೋಶದ ಚಿತ್ರ ಪಾರದರ್ಶಕವಾಗಿದ್ದು, ವಿವಿಧ ರಚನೆಗಳನ್ನು ನೋಡಬಹುದು. ಜೊತೆಗೆ ವಿವರಣೆಯೂ ಸಿಗುತ್ತದೆ. ಎರಡು ರೀತಿಯ ವಿವರಣೆಗಳಿದ್ದು, ಪ್ರಾಥಮಿಕ ವಿವರಣೆ ಪ್ರಾಥಮಿಕ ಶಾಲಾ ಮಕ್ಕಳಿಗೆ ಸೂಕ್ತ. ಹೆಚ್ಚುವರಿ ಮಾಹಿತಿ ಹೈಸ್ಕೂಲ್ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ವಿವರ ಒದಗಿಸುತ್ತದೆ.

## ಲ್ಯಾನ್ ಮೆಸೆಂಜರ್

ಒಂದು ಗುಂಪಿನಲ್ಲಿ ಕೆಲಸ ಮಾಡುವವರು ಪರಸ್ಪರ ಸಂವಹನ ಮಾಡಬೇಕಾದರೆ ಈ ಆ್ಯಪ್ ನೆರವಿಗೆ ಬರುತ್ತದೆ. ಒಂದು ಕಂಪೆನಿಯೊಳಗಡೆ ಉದ್ಯೋಗಿಗಳು ಖಾಸಗಿಯಾಗಿ ಹಾಗೂ ಸುರಕ್ಷಿತವಾಗಿ ಸಂದೇಶ ವಿನಿಮಯ ಮಾಡಿಕೊಳ್ಳಬಹುದು. ಅದು ಪ್ರಾಜೆಕ್ಟ್ ಇರಲಿ ಅಥವಾ ಮೀಟಿಂಗ್ ಬದಲಾವಣೆ ಇರಲಿ, ತಕ್ಷಣ ಸಂದೇಶ ಕಳಿಸಬಹುದು. ನಿಮ್ಮದೇ ಚ್ಯಾಟಿಂಗ್ ನಡೆಸಬಹುದು. ಇಲ್ಲಿಯೂ ಬೇರೆ ಬೇರೆ ವಿಭಾಗಗಳನ್ನು ಮಾಡಿಕೊಂಡರೆ ಆಯಾ ವಿಭಾಗದವರಿಗೆ ಸಂಬಂಧಿಸಿದ ಸಂದೇಶವನ್ನು ಮಾತ್ರ ಕಳಿಸಬಹುದು. ಸಾಫ್ಟ್ರೀಸ್ ಲ್ಯಾನ್ ಮೆಸೆಂಜರ್ ಆ್ಯಪ್ ಅನ್ನು ಆ್ಯಂಡ್ರಾಯ್ಡ್ ಸಾಧನದಲ್ಲಿ ಡೌನ್‌ಲೋಡ್ ಮಾಡಿ. ನಂತರ ಕಂಪೆನಿಯ ನೆಟ್‌ವರ್ಕ್ ಅನ್ನು ವೈಫೈ ಮೂಲಕ ಸಂಪರ್ಕಿಸಿ ಇತರ ಯಾವುದೇ ಸಾಧನಗಳು, ಅಂದರೆ ವಿಂಡೋಸ್, ಮ್ಯಾಕ್ ಓಎಸ್ ಬಳಕೆದಾರರ ಜೊತೆ ಹರಟೆ ಹೊಡೆಯಬಹುದು.




## ಕರ್ವ್‌ಮೇಲ್

ಪ್ರಾಥಮಿಕ ಇಮೇಲ್ ಆ್ಯಪ್ ಹಾಗೂ ವೆಬ್‌ಸೈಟ್‌ಗಳು ಇಮೇಲ್‌ಗಳನ್ನು ಬರೆಯಲು ಹಾಗೂ ಓದಲು ನೆರವು ನೀಡುತ್ತವೆ. ಆದರೆ ಮೂರನೇ ಪಾರ್ಟಿ ಇಮೇಲ್ ಆ್ಯಪ್‌ಗಳು ವಿವಿಧ ವಿಶೇಷತೆಗಳನ್ನು ಒಳಗೊಂಡಿರುತ್ತವೆ. ಅವುಗಳಲ್ಲಿ ಕರ್ವ್‌ಮೇಲ್ ಆ್ಯಂಡ್ರಾಯ್ಡ್ ಆ್ಯಪ್ ಆಗಿದ್ದು, ಇಮೇಲ್‌ಗಳನ್ನು ಹಾಗೂ ಬೇರೆ ಬೇರೆ ಇಮೇಲ್ ಖಾತೆಗಳನ್ನು ನಿರ್ವಹಣೆ ಮಾಡುತ್ತದೆ. ಸೆಟಿಂಗ್ ಮಾಡುವುದು ಬಹಳ ಸುಲಭ. ಆದರೆ ಅನಧಿಕೃತ ಆ್ಯಪ್‌ಗಳಿಂದ ರಕ್ಷಿಸಲು ಸೈನ್ ಇನ್ ಕೆಲವು ಬಾರಿ ಬ್ಲಾಕ್ ಆಗುವ ಸಂಭವವಿರುತ್ತದೆ. ಮೇಲ್ಮೈ ಕೂಡಾ ಚಾಗಿದ್ದು, ವಿಶಿಷ್ಟವಾಗಿದೆ. ನಿಮ್ಮ ಇನ್‌ಬಾಕ್ಸ್‌ಗಳನ್ನು ನಿಯಂತ್ರಿಸುವ ಸವಲತ್ತು ಕೂಡಾ ಇದರಲ್ಲಿದೆ. ಎಡ ಮತ್ತು ಬಲ ಭಾಗದಲ್ಲಿ ಸ್ವೈಪ್ ಮಾಡುವ ಮೂಲಕ ಸಂದೇಶಗಳನ್ನು ಡಿಲೀಟ್ ಮಾಡಬಹುದು. ತಕ್ಷಣಕ್ಕೆ ಮಾರುತ್ತರ ನೀಡಬಹುದು.





## ಆ್ಯಪ್ ಬಳಕೆದಾರರಿಗೆ ಎಚ್ಚರಿಕೆ

ಸ್ಮಾರ್ಟ್‌ಫೋನ್ ಬಳಕೆದಾರರು ಆ್ಯಂಡ್ರಾಯ್ಡ್ ಆ್ಯಪ್ ಬಳಸುವಾಗ ಎಚ್ಚರಿಕೆ ವಹಿಸುವುದು ಅಗತ್ಯ, ಕೆಲವೊಂದು ಆ್ಯಪ್‌ಗಳು ಫೋನಿನ ಬಿಲ್ಟ್–ಇನ್ ಸೆನ್ಸರ್‌ಗೆ ಸಂಪರ್ಕ ಪಡೆದು ಬಳಕೆದಾರರ ವಿವರ, ಅವರು ಎಲ್ಲಿದ್ದಾರೆ ಎಂಬುದನ್ನು ಪತ್ತೆ ಹಚ್ಚುತ್ತವೆ ಎಂದು ಬೋಸ್ಟನ್ ನಾರ್ಥ್‌ಈಸ್ಟರ್ನ್ ವಿಶ್ವವಿದ್ಯಾನಿಲಯದ ಅಧ್ಯಯನವೊಂದು ತಿಳಿಸಿದೆ. ಗೂಗ್ಲ್ ಪ್ಲೇ ಸ್ಟೋರ್‌ನಲ್ಲಿ ಯಾರು ಬೇಕಾದರೂ ಆ್ಯಪ್ ಹಾಕಬಹುದು. ಯಾರೂ ಇಂತಹ ಆ್ಯಪ್ ಅನ್ನು ತಪಾಸಣೆಗೆ ಒಳಪಡಿಸುವುದಿಲ್ಲ. ಈ ಆ್ಯಪ್‌ಗಳು ವೈಫೈ ಅಥವಾ ಜಿಪಿಎಸ್ ಅವಶ್ಯಕತೆ ಇಲ್ಲದೇ ನೇರವಾಗಿ ಸೆನ್ಸರ್ ಸಂಪರ್ಕ ಪಡೆದು ವಿವರ ಸಂಗ್ರಹಿಸುತ್ತವೆ. ಈ ವಿವರಗಳನ್ನು ಸಮಾಜ ಘಾತುಕ ವ್ಯಕ್ತಿಗಳು ಬಳಸುವ ಸಾಧ್ಯತೆ ಇದೆ ಎಂದು ಅಧ್ಯಯನ ಎಚ್ಚರಿಸಿದ್ದು, ನಿಮಗೆ ಪರಿಚಿತವಲ್ಲದ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಡಿ ಎಂದು ಸಲಹೆ ನೀಡಿದೆ.

■ ಎಸ್. ತುಂಬೆ